ಅವ್ಯವಹಾರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ' ಎನ್ನುವುದಕ್ಕೆ "ಲಿಖಿತ ಮೂಲಕ ಬಂದಿರುವುದಿಲ್ಲ, ಮಾಧ್ಯಮಗಳ ಮೂಲಕ ಬಂದಿದೆ" ಎಂದು ಉತ್ತರವನ್ನು ಕೊಟ್ಟಿದ್ದಾರೆ ಮಾಧ್ಯಮಗಳ ಮೂಲಕವೆಂದರೆ ಲಿಖಿತ ಮೂಲಕ ಅಲ್ಲವೇ?

ಶ್ರೀ ಎಸ್ ಎಸ್ ಪಾಟೀಲ್ ಈ ನಮೂನೆ ಉತ್ತರವನ್ನು ಕೊಡುತ್ತಾರಲ್ಲ, ಇದು ಸರಿಯೇ? ಅಧಿಕಾರಿಗಳು ಏನು ಮಾಡುತ್ತಾರೆ?

(ಗೊಂದಲ)

ಅಧ್ಯಕ್ಷರು ಈಗ ಡಿ ಆರ್ ಪಾಟೀಲರು ಅವರು ಇಲ್ಲ

ಶ್ರೀ ಕುಮಾರ್ ಬಂಗಾರಪ್ಪ ಇದನ್ನು ಇಲ್ಲಿಗೆ ಬಿಟ್ಟು ಬಿಡುವುದಾ?

ಅಧ್ಯಕ್ಷರು ಏನಪ್ಪ, ಮಾಡುತ್ತೀಯಾ? ಅದಕ್ಕೆ

(ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ ಸಚಿವರು) ಮಾನ್ಯ ಅಧ್ಯಕ್ಷರೇ, ದಿನಾಂಕ 09 02 2007 ರಂದು 9ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 64 ಪ್ರಶ್ನೆಗಳ ಪೈಕಿ 51 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ

ಅಧ್ಯಕ್ಷರು. ಮಂಡಿಸಲಾಯಿತು

ಶ್ರೀ ಜೆ ವಿ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೇ, ಶೂನ್ಯವೇಳೆ ಬಗ್ಗೆ ನೋಟೀಸ್ ಕೊಟ್ಟಿದ್ದೆ

ಅಧ್ಯಕ್ಷರು ಇವತ್ತು ಶೂನ್ಯವೇಳೆ ಇಲ್ಲ ಗಮನ ಸೆಳೆಯುವ ಸೂಚನೆಯೂ ಇಲ್ಲ ಇವತ್ತು ಏನಾಗಿದೆ ಎಂದರೆ ನಿಯಮ 69 ರ ಮೇಲೆ ಈ ಬರಪರಿಸ್ಥಿತಿ ಬಗ್ಗೆ ಏನು ಚರ್ಚೆ ಇದೆ, ಆ ಚರ್ಚೆ ಮತ್ತು ಉತ್ತರ ಇವತ್ತು ಮುಗಿಯಬೇಕು ಆ ಕಾರಣದಿಂದ ಇವತ್ತು ತೆಗೆದುಕೊಳ್ಳುತ್ತಿಲ್ಲ

ಶ್ರೀ ಜೆ ವಿ ಶ್ರೀರಾಮರೆಡ್ಡಿ ಶೂನ್ಯವೇಳೆ ಒಂದೇ ಒಂದು ನಿಮಿಷ

ಅಧ್ಯಕ್ಷರು ನಾನು ನಿಮಗೆ ಸೋಮವಾರ ಅವಕಾಶವನ್ನು ಕೊಡುತ್ತೇನೆ ಸೋಮವಾರ ಎಲ್ಲರೂ ಕೇಳಿದ್ದಾರೆ ಆವತ್ತು ಕೊಡುತ್ತೇನೆ ಈಗ ಜಯಪ್ರಕಾಶ್ ಹೆಗ್ಡೆಯವರೇ ಮಾತನಾಡಿ

ಶ್ರೀ ಜೆ ಸಿ ಮಾಧುಸ್ವಾಮಿ ಇವತ್ತು ಎಷ್ಟು ಹೊತ್ತಿನವರೆಗೂ ನಡೆಸುತ್ತೀರಿ?

ಅಧ್ಯಕ್ಷರು ಈಗ ಎರಡು ಗಂಟೆವರೆಗೆ ನಡೆಸೋಣ ಆದ್ದರಿಂದ ಈಗ ಒಂದೂವರೆ ಗಂಟೆವರೆಗೆ ಚರ್ಚೆ ಒಂದೂವರೆ ಗಂಟೆ ಆದ ಮೇಲೆ ಮಾನ್ಯ ಮಂತ್ರಿಗಳಿಂದ ಉತ್ತರ ಹೆಗ್ಡೆಯವರೇ ಮಾತನಾಡಿ

3 ನಿಯಮ 69ರ ಅಡಿಯಲ್ಲಿನ ಮುಂದುವರೆದ ಚರ್ಚೆ :

ವಿಷಯ : ರಾಜ್ಯದ 128 ತಾಲ್ಲೂಕುಗಳಲ್ಲಿ ಉಂಟಾಗಿರುವ ಬರ ಪರಿಸ್ಥಿತಿಯ ಬಗ್ಗೆ ಚರ್ಚೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) ಮಾನ್ಯ ಅಧ್ಯಕ್ಷರೇ, ಮೊನ್ನೆಯಿಂದ ರಾಜ್ಯದಲ್ಲಿರುವ ಬರ ಪರಿಸ್ಥಿತಿಯ ಬಗ್ಗೆ ಚರ್ಚೆ ಬಹಳಷ್ಟು ಆಗಿದೆ ಬಹಳ ಪ್ರಮುಖವಾಗಿ ಗಮನಿಸಬೇಕಾಗಿರುವುದು ರಾಜಸ್ತಾನ ಬಿಟ್ಟರೆ ಕರ್ನಾಟಕ ರಾಜ್ಯದಲ್ಲಿಯೇ ಹೆಚ್ಚು ಭಾಗ ಬರದ ಕಾರಣ desert ಆಗುತ್ತಿದೆಯೇನೋ ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ 128 ತಾಲ್ಲೂಕುಗಳನ್ನು ಈಗಾಗಲೇ declare ಮಾಡಿದ್ದಾರೆ ಇನ್ನು ಮುಂದಿನ ದಿನಗಳಲ್ಲಿ ಇನ್ನೆಷ್ಟು ತಾಲ್ಲೂಕುಗಳನ್ನು declare ಮಾಡುತ್ತಾರೆಂದು ಗೊತ್ತಾಗುವುದಿಲ್ಲ ನಮ್ಮ ಭಾಗದಲ್ಲಿ ಅದನ್ನು ಸೇರಿಸಿಲ್ಲ ಆದರೆ ಇತ್ತೀಚಿನ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವವಾಗಿದೆ ಕೃಷಿಕರು ಸಮಸ್ಯೆಯನ್ನು ಎದುರಿಸುತ್ತಿದ್ದಾರೆ ಅದಕ್ಕೆ ಮುಖ್ಯವಾಗಿ ನಾವು ವಿದ್ಯುತ್ ಬಗ್ಗೆ ಚರ್ಚೆಯನ್ನು ಆದರೊಟ್ಟಿಗೆ ಮಾಡಬೇಕಾಗಿದೆ ನಾವು ಈಗಾಗಲೇ ಬೆಳಿಗ್ಗೆ ನಮ್ಮ ಭಾಗದಲ್ಲಿ ಬೆಳಿಗ್ಗೆ 7 ಗಂಟೆಯಿಂದ power shut down ಆಗುತ್ತಿದೆ ಸಾಯಂಕಾಲ ಪುನ ಎರಡು ಗಂಟೆ shut down ಆಗುತ್ತದೆ ಅದರ ಮಧ್ಯದಲ್ಲಿ unscheduled power shut down ಎಷ್ಟು ಗಂಟೆಗಳಾಗುತ್ತಿದೆಯೋ ಗೊತ್ತಿಲ್ಲ ಅದರ ಅರ್ಧ ಮುಂದಿನ ದಿನ ನಾವು ಹೆಚ್ಚು ವಿದ್ಯುತ್ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ ಇವತ್ತಿನವರೆಗೆ ನೀವು ವಿದ್ಯುತ್‌ನ್ನು ಖರೀದಿ ಮಾಡಲಿಕ್ಕೆ ಒಂದು ನಯಾಪೈಸೆ ಖರ್ಚು ಮಾಡಿಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಅಧ್ಯಕ್ಷರೇ, ಏನಾದರೂ ಮಾಡಿ ನೀವು power Minister ನ್ನು ಇಲ್ಲಿಗೆ ಕರೆಸಬೇಕಲ್ಲ ತಾವು ಕೃಪೆ ಮಾಡಿ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಅವರು ಈ ಸದನದಕ್ಕೆ ಬಂದೇ ಇಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ ದೊಡ್ಡ ಮನಸ್ಸು ಮಾಡಿ ಸಾರ್